# ಊರ ರಕ್ಷಣೆಯ ಹುಡೇವು

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಹಿರೇಸಿಂಗನಗುತ್ತಿ ಎಂಬ ಗ್ರಾಮ ಹಿಂದೆ ಚಾಲುಕ್ಯರ (ಬಾದಾಮಿ) ಕಾಲದಲ್ಲಿ ಮಾಂಡಲೀಕ ಅರಸನ ಅಧೀನದಲ್ಲಿತ್ತು. ಆ ಆಳರಸನು ವೈರಿಗಳು ತನ್ನ ಊರಿಗೆ ಮುತ್ತಿಗೆ ಹಾಕಬಾರದೆಂಬ ಉದ್ದೇಶದಿಂದ ಊರ ಸುತ್ತ ಕಲ್ಲಿನಕೋಟೆ ಗೋಡೆ (15 ಅಡಿ) ಕಟ್ಟಿಸಿ ನಾಲ್ಕು ದಿಕ್ಕಿಗೆ ಒಂದೊಂದರಂತೆ ದೊಡ್ಡ ಹುಡೇವುಗಳನ್ನು ಕಟ್ಟಿಸಿದ. ಊರಿಗೆ ಒಂದೇ ದೊಡ್ಡ ಅಗಸಿ ಬಾಗಿಲಿತ್ತು. ಕಳೆದ ಅರವತ್ತು ವರ್ಷಗಳಿಂದ ಈಚೆಗೆ ಜನರು ಕೋಟೆ ಗೋಡೆಯ ಕಲ್ಲುಗಳನ್ನು ಬಳಸಿಕೊಂಡು ಮನೆಯನ್ನು ಕಟ್ಟಿಸಿಕೊಂಡಿದ್ದಾರೆ. ಆದರೆ ನಾಲ್ಕು ದಿಕ್ಕಿಗೆ ಇರುವ ನಾಲ್ಕು ಕಲ್ಲಿನ ಹುಡೇವುಗಳು ಮಾತ್ರ ಸುಸ್ಥಿತಿಯಲ್ಲಿವೆ. ಊರಿನ ಉತ್ತರ ದಿಕ್ಕಿನ ಅಗಸೆಯ ಬಲಭಾಗಕ್ಕಿರುವ ಈ ಲಕ್ಷ್ಮೀ ಹುಡೇವು 50 ಅಡಿ ಎತ್ತರವಿದೆ. 150 ಅಡಿ ಸುತ್ತಳತೆ ಹೊಂದಿದೆ. ಕಲ್ಲಿನ ಮಾಡಿನವರೆಗೆ ಕಲ್ಲು ಮಣ್ಣಿನಿಂದ ತುಂಬಿದ್ದು ಮೇಲ್ಭಾಗದಲ್ಲಿ ಸಣ್ಣ ಸಣ್ಣ ರಂಧ್ರಗಳಿವೆ. ಎಂತಹ ಮಳೆ, ಗಾಳಿ ಬಂದರೂ ಈ ಹುಡೇವಿನಿಂದ ಒಂದು ಕಲ್ಲು ಸಹ ಕೆಳಗೆ ಬಿದ್ದಿಲ್ಲ.

ಚಿತ್ರ- ಬರಹ:
**ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**





# ಬೆಡಸಗಾಂವ್‌ನ ಐತಿಹಾಸಿಕ ದೇಗುಲ

ಹಳ್ಳಿ ಬಿಟ್ಟು ಪಟ್ಟಣ ಸೇರುತ್ತಿರುವ ಈ ಕಾಲದಲ್ಲಿ ಜನರು ಮಾತ್ರವಲ್ಲ, ದೇವರೂ ಹಳ್ಳಿಯಲ್ಲಿರಲು ಇಷ್ಟಪಡಲಾರ! ಇದಕ್ಕೊಂದು ಉದಾಹರಣೆ ಬೆಡಸಗಾಂವ್‌ನ ಒಂದು ಪ್ರಾಚೀನ ದೇಗುಲದ ದುಸ್ಥಿತಿ. ಉತ್ತರ ಕನ್ನಡದ ಮುಂಡಗೋಡ ತಾಲ್ಲೂಕಿನಲ್ಲಿರುವ ಬೆಡಸಗಾಂವ್ ಬನವಾಸಿಯ ಕದಂಬರ ಆಳ್ವಿಕೆಯ ಕಾಲದಲ್ಲಿ ಗುಡಿ–ಗೋಪುರ, ಶಿಲಾ ಶಾಸನಗಳಿಂದ ಕೂಡಿ ಒಂದು ಐತಿಹಾಸಿಕ ಸ್ಥಳವಾಗಿ ಗುರುತಿಸಿಕೊಂಡ ಪ್ರದೇಶ. ಇಂದಿಗೂ ಕೆಲವು ಶಿಲಾ ದೇಗುಲಗಳು, ವೀರಗಲ್ಲುಗಳು, ಆ ಕಾಲದ ಕೆಂಪು ಕಲ್ಲಿನಿಂದ ನಿರ್ಮಾಣಗೊಂಡ ಶಿವಾಲಯಗಳು ಇಲ್ಲವೆ. ಸುಮಾರು 12ನೇ ಶತಮಾನದಲ್ಲಿ ನಿರ್ಮಾಣಗೊಂಡ ದೇವಾಲಯಗಳಿವು. ಕ್ರಿ.ಶ. 1163ರ ಶಿಲಾಫಲಕದಲ್ಲಿ ಈ ಊರಿನ ಹೆಸರು 'ಬೆಡಸಗಾಮೆ' ಎಂದಿದೆ. ಇವುಗಳಲ್ಲಿ ಕೆಲವು ದೇವಾಲಯಗಳು ಭಕ್ತರಿಂದ ಜೀರ್ಣೋದ್ಧಾರಗೊಂಡಿವೆ. ಇನ್ನು ಕೆಲವು ದುಸ್ಥಿತಿಯಲ್ಲಿವೆ.

ಚಿತ್ರದಲ್ಲಿರುವ ಕೆಂಪು ಕಲ್ಲಿನಿಂದ ನಿರ್ಮಾಣಗೊಂಡ ಶಿವಾಲಯವು ಈಗ ಒಂದು ಗುಹೆಯಂತಾಗಿದ್ದು, ಬಹುಶಃ, ನಗರ ಪ್ರದೇಶದಲ್ಲಿದ್ದರೆ ಒಂದು ಹೈಟೆಕ್ ದೇಗುಲವಾಗಿ ಬದಲಾಗುತ್ತಿತ್ತೇನೊ, ಆದರೆ, ಹಳ್ಳಿಯಲ್ಲಿ ಆ ಭಾಗ್ಯ ಬರಲಿಲ್ಲ.

ಚಿತ್ರ- ಬರಹ:
**ಅರ್ಚನಾ ಬೊಮ್ನಳ್ಳಿ, ಶಿರಸಿ**

# ದೇಶೀಯ ನಾಣ್ಯಗಳು

ವಿದೇಶಿ ನಾಣ್ಯಗಳ ಸಂಗ್ರಹಣೆ ಬಗ್ಗೆ ಸಾಕಷ್ಟು ಮಾಹಿತಿ ಸಿಗುತ್ತದೆ. ಆದರೆ ನಮ್ಮ ದೇಶದ ಹಲವು ನಾಣ್ಯಗಳು (ಅಂದಿನ ರಾಜಕೀಯ ಮುತ್ಸದ್ದಿಗಳ, ಧಾರ್ಮಿಕ ಗುರುಗಳ, ಪ್ರಮುಖ ವ್ಯಕ್ತಿಗಳ ಹಾಗೂ ವಿಶೇಷ ಸಂದರ್ಭಗಳಲ್ಲಿ ಬಿಡುಗಡೆ ಮಾಡಿದವು) ನಗರದ ಶಾಲೆಯೊಂದರಲ್ಲಿ ಕ್ರಮವಾಗಿ 8 ಹಾಗೂ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ, ಸಾಂತ್ವಿಕ್ ಮತ್ತು ತನ್ಮಯಿ, ಅವರು ತಮ್ಮ ನಾಣ್ಯ ಸಂಗ್ರಹಣೆಯಲ್ಲಿ ಇಟ್ಟುಕೊಂಡಿದ್ದಾರೆ.

**-ಸುಂದರ್, ಬೆಂಗಳೂರು**

